ಶಾಂತಗೌಡರು ಸ್ಕಾರ್ಪಿಯೋ ಗಾಡಿಯಿಂದ ಇಳಿದಿದ್ದೇ ಮೂರು ಜನ ಆಳುಗಳು ಓಡೋಡಿ ಬಂದು ಕೈ ಕಟ್ಟಿ ನಿಂತರು. ಅವರಿಗೆ ದೂರ ಸರಿರಿ ಎಂದು ಸನ್ನೆ ಮಾಡಿ 'ಎಲ್ಲಾ ಸಾಮಾನು ಬಂದಾವನು?' ಎಂದು ಕೇಳಿದರು. 'ಎಲ್ಲಾ ಬಂದಾವಪ್ಪೋ ಒಳಗ ಕೋಣ್ಯಾಗ ಇಟ್ಟೇವಿ.' 'ಆಯಿತು ನಾಳೆ ಒಯ್ಯಬೇಕು. ಎಲ್ಲಾ ಜೋಡಿಸಿ ಇಡರಿ' ಎಂದು 'ಲೇ ಕೆಂಚ' ಅಂತ ಕೂಗಿದರು. 'ಯಪ್ಪೋ...' ಅಂತ ಒಳಗಿಂದ ಕಂಚಿನ ತಂಬಿಗೆಯಲ್ಲಿ ನೀರು ತಗಂಡು ಬಂದು ಕಾಲಿಗೆ ಸುರಿದು, ಕೈಯಲ್ಲಿ ವಸ್ತ್ರ ಕೊಟ್ಟ. ಗೌಡರು ಕೈ ಒರಿಸಿಗಂತ ಒಳಗ ಹೋದರು. ದಿನನಿತ್ಯ ಕೂಡುವ ಕುರ್ಚಿ ಮೇಲೆ ಕುಳಿತರು. ಕುರ್ಚಿ ಮೇಲೆ ಕೈಯಿಟ್ಟು ಅದನ್ನೊಮ್ಮೆ ದಿಟ್ಟಿಸಿ ನೋಡಿದರು. ಹೊಸದೆಂಬಂತೆ ಕಂಡಿತು. ಮತ್ತೊಮ್ಮೆ ಬೆರಗಿನಿಂದ ದಿಟ್ಟಿಸಿ ನೋಡಿದರು. 'ಲೇ... ಕೆಂಚ... ಕುರ್ಚಿ ಯಾಕ ಹೊಸ ನಮೂನಿ ಕಾಣತದಲೇ...' ಕುರ್ಚಿಯಿಂದ ಎದ್ದು ಅದನ್ನು ಒಳ್ಳಿ ಒಳ್ಳಿ ನೋಡಿದರು. 'ಯಪ್ಪೋ... ಉಳ ತಿನ್ನಾಕ ಹತ್ತಿತ್ತು. ನಾನೇ ಕಟಿಗಿ ವಾರನೀಸು ಹಚ್ಚಿನಪ್ಪೋ...' 'ಅದೆಂಗ ಹುಳ ತಿಂತಾದಲೇ... ನೂರ ವರುಷ ಮೇಲಾದರೂ ಏನ ಆಗಿರಲಿಲ್ಲ. ಈಗೆಂಗ ಹುಳ ಇಡಿತಾದಲೇ...' ಎಂದು ತುಸು ಅಸಮಾಧಾನದಿಂದಲೇ ಕೇಳಿದರು. 'ಕುರ್ಚಿ ಕಾಲು ಬುಡಕ್ಕ ಹುಳು ಕೊರದಿತ್ತಪ, ಅದಕ ವಾರನೀಸು ಹಚ್ಚಿದಿನಪ್ಪೋ' ಎಂದು ಕುರ್ಚಿ ಎತ್ತಿ ತೋರಿಸಿದ. 'ಬೇಸು ಮಾಡಿದಿ ಬುಡು' ಎಂದು ಅದರ ಮೇಲೆ ಗಂಭೀರವಾಗಿ ಕುಳಿತರು.

ಮನೆಯನ್ನು ಒಮ್ಮೆ ಗಂಭೀರವಾಗಿ ಅವಲೋಕಿಸಿದರು. ಯಾಕೋ ಭಯ ಅನಿಸಿತು. ನಿನ್ನೆ ನಡೆದ ಮಾತುಕತೆಗಳು ನೆನಪಾದವು. ಮಗನ ಮೇಲೆ ಸಿಟ್ಟು ಬಂತು. ಎಲ್ಲೋ ಒಂದು ಕಡೆ ಆರಾಮ ಇರದು ಬುಟ್ಟು ಊರು ಕಡೆ ಯಾಕ ಮುಖ ಮಾಡಿಕಂಡು ಕುಂತಾನು. ಆತಗ ಬುದ್ಧಿ ಹೇಳುವಷ್ಟು ಐಸತ್ತು ನನ್ನ ಹತ್ತಿರಂತು ಇಲ್ಲ. ಏನಾತದ



ಎಸ್.ವಿ. ಹೂಗಾರ